ಹಣಕಾಸಿನ ಮಂತ್ರಿಗಳಿಗೆ ತಿಳಿಸಿ ಒಂದು ಸಮಂಜಸವಾದ ಉತ್ತರವನ್ನು ಸರ್ಕಾರದಿಂದ ಕೊಡಲಿಕ್ಕೆ ಅವರಿಗೆ ತಿಳಿಸುತ್ತೇನೆ.

11.20 ಎ.ಎಂ

ಉ) ಬೆಳಗಾವಿ ನಗರಕ್ಕೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಬರುತ್ತಿರುವುದರ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಮಗೆ ನಾನು ಒಂದು ವಿಷಯವನ್ನು ಹೇಳಿದ್ದೆ.

ಅಧ್ಯಕ್ಷರು : ವಿಷಯಗಳು ಬಹಳ ಇವೆ. ಬೇಕಾದರೆ ನಾಳೆ ಪ್ರಸ್ತಾಪ ಮಾಡಿ. ಇಲ್ಲದಿದ್ದರೆ ಅವರ ಆಕ್ಷೇಪಣೆ ನಿಜವಾಗಿಬಿಡುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಇದು ಪತ್ರಿಕೆಯಲ್ಲಿ ಬಂದಿದೆ, ರಾಜ್ಯದ ಜನತೆಗೆ ಸಂಬಂಧಪಟ್ಟಿರುವಂಥಾದ್ದು. ತಾವು ಮನಸ್ಸಿಗೆ ನೋವು ಮಾಡಿಕೊಳ್ಳುವುದಾದರೆ ಈ ವಿಷಯವನ್ನು ಎತ್ತುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಈ ಸಂದರ್ಭದಲ್ಲಿ ಇಲ್ಲಿ ಉಪಮುಖ್ಯಮಂತ್ರಿಗಳು ಇದ್ದಾರೆ. ಬೆಳಗಾವಿ ನಗರಕ್ಕೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಬರುತ್ತಿದ್ದಾರೆ. ಇನ್ನು ಎರಡು ವಾರಗಳಲ್ಲಿ ಅವರು ಬರುತ್ತಿದ್ದಾರೆ. ಇದು ಇವತ್ತಿನ ಪತ್ರಿಕೆಯಲ್ಲಿ ಬಂದಿದೆ. ಮಹಾರಾಷ್ಟ್ರದಲ್ಲಿ ಆ ಮುಖ್ಯಮಂತ್ರಿಗಳು ಕುಳಿತುಕೊಂಡು ಬೆಳಗಾವಿಯಲ್ಲಿರತಕ್ಕ ಎಲ್ಲ ಕನ್ನಡಿಗರನ್ನು ಹೊರಗಡೆಗೆ ಕಳಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಇದು ಬೆಳಗಾವಿ ಪ್ರಶ್ನೆ ಇದು, ಇದನ್ನು ಮತ್ತೆ ಪಡೆಯುತ್ತೀವೆಂದು ಪ್ರಚೋದನೆ ಮಾಡಿಕೊಂಡು ಹೋಗುತ್ತಿದ್ದಾರೆ. ಅವರು ಇನ್ನು ಎರಡು ವಾರಗಳಲ್ಲಿ ಬೆಳಗಾವಿಗೆ ಬರುವುದಾದರೆ ಏನು ಪರಿಸ್ಥಿತಿ ಆಗಬಹುದು? ಅವರು ಪ್ರಾಮಾಣಿಕವಾಗಿ ಬಂದು ಹೋಗುವುದಾದರೆ ನಮ್ಮ ಅಭ್ಯಂತರವಿಲ್ಲ. ಅವರು ಇಲ್ಲಿಗೆ ಬರುವ ಉದ್ದೇಶ ಏನಿದೆ ಎಂದರೆ, ಇವತ್ತು ಪ್ರಚೋದನೆ ಮಾಡುವುದಕ್ಕೆಂದು ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಅವರನ್ನು ಕರೆಸುತ್ತಿದ್ದಾರೆ; ಮತ್ತು ಅಲ್ಲಿಯ ಮುಖ್ಯಮಂತ್ರಿಗಳು ಬರುತ್ತಿದ್ದಾರೆ.

ಇಲ್ಲಿ ಅವರು ಬಂದು ಪ್ರಚೋದನೆ ಮಾಡಿದತಕ್ಷಣ ನಾಳೆ ನಮ್ಮ ಪರಿಸ್ಥಿತಿ ಏನಾಗಬಹುದು? ಅದಕ್ಕಾಗಿ ನಾನು ತಮಗೆ ಹೇಳುವುದೇನೆಂದರೆ, ಅವರು ಸ್ನೇಹದಿಂದ ಬರುವುದಿದ್ದರೆ ಸರಿ. ಇಲ್ಲದಿದ್ದರೆ ಅವರು ಪ್ರಚೋದನೆ ಮಾಡುವುದಕ್ಕೆಂದು ಬರುತ್ತಾರೆ ಎಂದು ಹೇಳುವುದಾದರೆ ಆಗ ನಾವು ಬೇರೆ ರೀತಿಯಲ್ಲಿ ಹೇಳಬೇಕಾಗುತ್ತದೆ. ಅವರು ಬಾರದ ಹಾಗೆ ನಾವು ತಡೆಹಿಡಿಯಬೇಕಾಗುತ್ತದೆ. ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಈ ತರಹ ಪ್ರಚೋದನೆ ಮಾಡತಕ್ಕಂಥ ವಿಚಾರಕ್ಕೆ ಬರುವುದಾದರೆ ಅದರಿಂದ ಅತ್ಯಂತ ಗಂಭೀರ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗುತ್ತದೆ. ಈಗ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಅಲ್ಲಿಗೆ ಹೋಗಿದ್ದಾರೆ. ಅದಕ್ಕಾಗಿ ನಾನೇನು ಹೇಳುತ್ತಿದ್ದೇನೆ ಎಂದರೆ ಒಂದು ಅದನ್ನು ತಡೆಹಿಡಿಯಬೇಕು, ಅವರು ಸೌಜನ್ಯಕ್ಕೆ ಬಂದರೆ ನಮ್ಮದೇನೂ ಅಭ್ಯಂತರ ಇಲ್ಲ. ಒಳ್ಳೆಯ ಉದ್ದೇಶದಿಂದ ಒಬ್ಬ ರಾಜ್ಯದ ಮುಖ್ಯಮಂತ್ರಿಗಳು ಬರುವುದಾದರೆ ಅವರನ್ನು ತಡೆಯತಕ್ಕದ್ದು ನಮ್ಮ ಉದ್ದೇಶ ಅಲ್ಲ. ಆದರೆ ಅವರು ಮಹಾರಾಷ್ಟ್ರ ಏಕೀಕರಣ ಸಮಿತಿಯವರ ಸಭೆಗೆ ಬಂದು ಪ್ರಚೋದನೆ ಮಾಡತಕ್ಕಂಥ ಪರಿಸ್ಥಿತಿಗೆ ಬರುವುದಾದರೆ ಅದು ಖಂಡಿತ ಸರಿಯಾದುದಲ್ಲ. ಆದ್ದರಿಂದ ನಾನು ಇದನ್ನು ಸ್ಪಷ್ಟವಾಗಿ ವಿರೋಧಿಸುತ್ತಿದ್ದೇನೆ. ಮತ್ತು ಈ ಸಭೆಯಲ್ಲಿ ಒಂದು ನಿರ್ಣಯವಾಗಬೇಕು. ಅದೇನೆಂದರೆ ಮುಖ್ಯಮಂತ್ರಿಯವರು ಮತ್ತು ಬಾಳಠಕ್ರೆಯವರು ಏನು ಬೇರೆ ಜನಾಂಗಗವರನ್ನು ಅಲ್ಲಿಂದ ಓಡಿಸುತ್ತೇವೆ ಎಂದು ಹೇಳಿರತಕ್ಕಂಥಾದ್ದು,

ಕನ್ನಡಿಗರ ಮೇಲೆ ಆಕ್ರಮ ಮಾಡತಕ್ಕಂಥಾದ್ದು ಇದ್ದರೆ, ಈ ಬಗ್ಗೆ ಒಂದು ನಿರ್ಣಯವನ್ನು ಸಭೆಯಲ್ಲಿ ತೆಗೆದುಕೊಳ್ಳಲೇ ಬೇಕಾಗುತ್ತದೆ.

ಇಷ್ಟು ಹೊತ್ತಿಗಾಗಲೇ ನಿರ್ಣಯ ಆಗಿಬಿಡಬೇಕಾಗಿತ್ತು. ಆದ್ದರಿಂದ ಈ ನಿರ್ಣಯ ಆಗಲಿ. ತಾವು ಹೇಳಬಹುದು ಏನು ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡುತ್ತೀರಾ, ಧರಣಿ ಮಾಡುತ್ತೀರಾ ಅಂತ. ಅದು ನಮ್ಮ ಹಕ್ಕು. ನಾನು ಸಭಾತ್ಯಾಗವನ್ನೂ ಮಾಡುತ್ತೇನೆ, ಧರಣಿಯನ್ನೂ ಮಾಡುತ್ತೇನೆ. ಅಥವಾ ನಾನು ಕಪ್ಪುಬಾವುಟವನ್ನು ಹಿಡಿಯುತ್ತೇನೆ. ನನ್ನ ಹಕ್ಕನ್ನು ಯಾರೂ ಕಸಿದುಕೊಳ್ಳುವುದಕ್ಕೆ ಆಗುವುದಿಲ್ಲ. ಇಂತಹ ಪರಿಸ್ಥಿತಿ ಇದ್ದರೆ ಬೆಳಿಗ್ಗೆ ಎದ್ದರೆ ಮನಸ್ಸಿಗೆ ನೋವಾಗುತ್ತದೆ. ಈ ರೀತಿ ಅಲ್ಲಿಯ ಮುಖ್ಯಮಂತ್ರಿಗಳು ಬರುತ್ತಾರೆ ಎಂದರೆ ಇಲ್ಲಿ ನಮ್ಮ ಪರಿಸ್ಥಿತಿ ಏನಾಗಬೇಕು? ಆದ್ದರಿಂದ ನಾನು ಹೇಳುವುದೇನೆಂದರೆ ಇವತ್ತೇ ನಿರ್ಣಯ ಮಾಡಬೇಕು. ಈ ನಿರ್ಣಯವನ್ನು ಇವತ್ತು ಸಾಯಂಕಾಲದೊಳಗೆ ಬೇಕಾದರೆ ಮಾಡಿ. ನಮ್ಮದೇನೂ ಅಭ್ಯಂತರ ಇಲ್ಲ. ಮಹಾರಾಷ್ಟ್ರದ ಈ ನೀತಿಯನ್ನು ನಾವು ಖಂಡನೆ ಮಾಡಲೇಬೇಕಾಗುತ್ತದೆ.

ಅಧ್ಯಕ್ಷರು : ತಾವು ಈಗ ಪ್ರಸ್ತಾಪ ಮಾಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಅವರು ಸಮಾಧಾನಕರವಾದ ಉತ್ತರವನ್ನು ಕೊಟ್ಟರೆ ಸಂತೋಷ.

ಅಧ್ಯಕ್ಷರು : ಸಮಾಧಾನಕರವಾದ ಉತ್ತರವನ್ನು ಕೊಡುತ್ತಾರೆ. ಮಾನ್ಯ ಪಟೇಲರು ಇದ್ದಾರಲ್ಲ, ಅವರು ಉತ್ತರ ಕೊಟ್ಟರೆ ನಿಮಗೆ ಸಮಾಧಾನವಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿ) : ಸನ್ಮಾನ್ಯ ಅಧ್ಯಕ್ಷರೇ, ನೆರೆ ರಾಜ್ಯದ ಮುಖ್ಯಮಂತ್ರಿಗಳು ಇಲ್ಲಿ ಬಂದು ಪ್ರಚೋದನೆ ಮಾಡುತ್ತಾರೆ ಎಂದರೆ, ಅವರು ಬರುವಾಗ ನಮ್ಮನ್ನು ಕೇಳಿಯೇ ಮಾಡುತ್ತಾರೆ. ಇದು ಶಿಷ್ಟಾಚಾರ. ಯಾವುದೇ ಮುಖ್ಯಮಂತ್ರಿಗಳು ಎಲ್ಲೋ ಹೋಗಿ ಏನೇ ಹೇಳುವುದಕ್ಕೆ ಆಗುವುದಿಲ್ಲ. ರಾಜ್ಯಾಂಗಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆ. ಅದರ ಜೊತೆಗೆ ನಾವು ಪ್ರಮಾಣವಚನವನ್ನು ಸ್ವೀಕಾರ ಮಾಡಿದ್ದೇವೆ. ಆ ರಾಜ್ಯಕ್ಕೂ ಅದೇ ರಾಜ್ಯಾಂಗ, ಈ ರಾಜ್ಯಕ್ಕೂ ಅದೇ ರಾಜ್ಯಾಂಗ. ಆದ್ದರಿಂದ ಅಲ್ಲಿನ ಮುಖ್ಯಮಂತ್ರಿಗಳು ಎಂ.ಇ.ಎಸ್. ಸಭೆಗೆ ಅಲ್ಲ, ಅವರು ಯಾವುದಾದರೂ ಲಗ್ನಕ್ಕೆ ಬಂದರೂ ಕೂಡ ನಮಗೆ ತಿಳಿಸಬೇಕಾಗುತ್ತದೆ. ಅವರು ಯಾವುದೇ ಸಣ್ಣ ಕಾರ್ಯಕ್ರಮಕ್ಕೆ ಬರುವುದಾದರೂ ಕೂಡ ನಮಗೆ ತಿಳಿಸಬೇಕಾದುದು, ಒಂದು ಶಿಷ್ಟಾಚಾರ. ಅವರು ಬರುವಾಗ ಪ್ರಚೋದನೆ ಮಾಡುವುದಕ್ಕೆ ಬರುತ್ತಾರೆ ಎಂದರೆ ಆಗ ನಾವು ಬರಬೇಡಿ ಎಂದು ಹೇಳುವುದಕ್ಕಾಗುತ್ತದೆ. ನಮಗೆ ಆ ಮಾಹಿತಿ ಇಲ್ಲ. ಕೇವಲ ಪತ್ರಿಕೆಯಲ್ಲಿ ಬಂದಿದೆ.

ಶ್ರೀ ವಾಟಾಳ್ ನಾಗರಾಜ್ : ಈಗ ನಾನು ತಮಗೆ ಹೇಳುತ್ತಿದ್ದೇನೆ, ಏನೆಂದರೆ ಅವರು ಬರುವಾಗ ಪ್ರಚೋದನೆ ಮಾಡಲಿಕ್ಕೇ ಬರುತ್ತಾರೆ ಎಂದಲ್ಲ. ಹಿಂದೆ ಮಾಜಿ ಮುಖ್ಯಮಂತ್ರಿಗಳಾದ ಶರದ್ ಪವಾರ್ ಅವರು ಅಲ್ಲಿ ಪ್ರತಿಬಂಧಕಾಜ್ಞೆ ಇದ್ದರೂ ಸಹ ಅವರು ಬಂದಿದ್ದರು. ಇದು ತಮಗೆ ಗೊತ್ತಿದೆ. ಅವರು ಹಾಗೆ ಬಂದು ಅಲ್ಲಿ ಏನು ನಡೆಯಿತು ಎಂಬುದು ತಮಗೆ ಗೊತ್ತು. ಇವತ್ತು ಕೂಡ ಅವರು ಬಂದು ಪ್ರಚೋದನೆ ಮಾಡಲಿಕ್ಕೆ ಅವಕಾಶ ಇದೆ. ಆದ್ದರಿಂದ ಸರ್ಕಾರದಿಂದ ಒಂದು ನಿರ್ಣಯವಾಗಬೇಕು. ಸರ್ಕಾರ ಒಂದು ಸ್ಪಷ್ಟವಾದ ಸರ್ವಾನುಮತದ ಒಂದು ನಿರ್ಣಯವನ್ನು ಮಾಡಲಿ. ಅದನ್ನು ಮಾಡಬೇಕಾದದ್ದು ಸರ್ಕಾರದ ಕರ್ತವ್ಯ.

ಶ್ರೀ ಜೆ.ಹೆಚ್. ಪಟೇಲ್ : ಸರ್ವಾನುಮತದ ನಿರ್ಣಯ ಇದೆ. ನಾವು ಮಹಾಜನ್ ಕಮೀಷನ್ ವರದಿಗೆ ಬದ್ಧರಾಗಿದ್ದೇವೆ. ಅದರ ವಿರುದ್ಧ ಯಾವುದೇ

ಸರ್ಕಾರ ಬರಲಿ, ಅದು ಬದಲಾವಣೆಯಾಗುವುದಿಲ್ಲ. ಒಬ್ಬರು ಮುಖ್ಯಮಂತ್ರಿಯವರು ಬದಲಾವಣೆ ಆದಕೂಡಲೇ ಇದು ಸಹ ಬದಲಾವಣೆ ಆಗಬೇಕು ಅಂತ ಇಲ್ಲ. ನಮ್ಮ ನಿಲುವು ಸ್ಪಷ್ಟ ಇದೆ. ಇದನ್ನು ನಾವು ಕೇಂದ್ರಸರ್ಕಾರಕ್ಕೂ ಹೇಳಿದ್ದೇವೆ, ಸಂಬಂಧಪಟ್ಟ ರಾಜ್ಯ ಸರ್ಕಾರಕ್ಕೂ ಹೇಳಿದ್ದೇವೆ. ಇದು ಯಾರೋ ಬಂದು ಹೇಳುತ್ತಾರೆ, ಅಥವಾ ಪತ್ರಿಕೆಯಲ್ಲಿ ಬಂದರೆ ಆ ಬೆದರಿಕೆಗೆ ಈ ಸದನ ಹೆದರುವುದಿಲ್ಲ. ಈ ಕರ್ನಾಟಕದಲ್ಲಿ ಯಾರೂ ಹೆದರುವುದಿಲ್ಲ. ಅವರು ಏನು ಬಂದು ಹೇಳಿಬಿಡುತ್ತಾರೆ, ಎಂ.ಇ.ಎಸ್. ನವರು ಹೇಳಿದ ಕೂಡಲೇ ಅವರು ಇಲ್ಲಿರುವ ಕನ್ನಡಿಗರನ್ನು ಓಡಿಸಬಹುದು ಎಂದು ಹೇಳುವುದು ಇದೆಯಲ್ಲ, ಅವೆಲ್ಲ ಕತೆಗಳು. ದಂತ ಕಥೆಗಳು. ಅದೆಲ್ಲದಕ್ಕೂ ಈ ಸರ್ಕಾರ ಹೆದರುವುದಿಲ್ಲ. ಇಂತಹ ಪರಿಸ್ಥಿತಿ ಬರುವುದಿಲ್ಲ. ಬಂದರೂ ಕೂಡ ಅದನ್ನು ಹೇಗೆ ನಿಭಾಯಿಸಬೇಕೋ ಅದನ್ನು ನಾವು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಧೈರ್ಯವನ್ನು ನಾವು ಮೆಚ್ಚಿದ್ದೇವೆ. ನಾನು ಏನು ಹೇಳುತ್ತಿದ್ದೇನೆ ಎಂದರೆ, ಒಂದು ನಿರ್ಣಯವನ್ನು ತಾವು ಮಾಡಿ. ತಾವು ಒಂದು ನಿರ್ಣಯವನ್ನು ಮಾಡಿದರೆ, ಆಗ ಏನಾಗುತ್ತದೆ ಎಂದರೆ, ಸರ್ಕಾರದ ನಿಲುವು ಸ್ಪಷ್ಟವಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ಈ ಸದನದಲ್ಲಿ ನಿರ್ಣಯದ ಅವಶ್ಯಕತೆ ಇದ್ದರೆ, ಮಾನ್ಯ ಸದಸ್ಯರಿಗಿಂತ ಮುಂಚೆ ನಿರ್ಣಯದ ಅವಶ್ಯಕತೆ ಇದ್ದರೆ ಒಂದು ಕ್ಷಣ ಕೂಡ ನಾವು ತಡಮಾಡುವುದಿಲ್ಲ.

ಅಧ್ಯಕ್ಷರು : ಅವಶ್ಯಕತೆ ಬಗ್ಗೆ ಆಲೋಚನೆ ಮಾಡೋಣ.

ಶ್ರೀ ಜೆ.ಹೆಚ್. ಪಟೇಲ್ : ಹೌದು, ಅವಶ್ಯಕತೆ ಬಗ್ಗೆ ಆಲೋಚನೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಈ ಪದಗಳನ್ನು ತಮ್ಮ ಅನುಕೂಲತೆಗೆ ಅನುಗುಣವಾಗಿ ಬಳಸುತ್ತೀರಿ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರು ಹೇಳಿದ ಮೇಲೆ ನಾನು ಬೇಡವೆಂದು ಹೇಳುವುದಕ್ಕಾಗುತ್ತದಾ?

ಗಮನ ಸೆಳೆಯುವ ಸೂಚನೆಗಳು

ಅ) ಧಾರವಾಡ ಜಿಲ್ಲಾ ಕೋ-ಆಪರೇಟಿವ್ ಆಯಿಲ್ ಮಿಲ್ ಸೀಡ್ ಪ್ರೊಸೆಸಿಂಗ್ ಸೊಸೈಟಿಯು ಸರ್ಕಾರದಿಂದ ಪಡೆದ ಹಣ ಹಾಗೂ ಸಾಲವನ್ನು ಪಡೆದಿದ್ದರೂ ಸಹ ಆಡಳಿತದಲ್ಲಿನ ಅವ್ಯವಹಾರದ ಬಗ್ಗೆ

ಶ್ರೀ ಸಿ.ಎಂ. ಉದಾಸಿ (ಹಾನಗಲ್) : ಸನ್ಮಾನ್ಯ ಸಭಾಧ್ಯಕ್ಷರೇ, ಧಾರವಾಡ ಜಿಲ್ಲೆಯು ಗದಗ್‌ನಲ್ಲಿರುವ ಕೋ-ಆಪರೇಟಿವ್ ಆಯಿಲ್ ಮಿಲ್ ಸೀಡ್ ಪ್ರೊಸೆಸಿಂಗ್ ಸೊಸೈಟಿಯವರು ನಾಲ್ಕು ಕೋಟಿ ರೂಪಾಯಿಗಳಷ್ಟು ಶೇರು ಹಣ ಮತ್ತು ಸಾಲ ಪಡೆದು ಈ ಸಂಸ್ಥೆಯನ್ನು ಇವತ್ತು ಬಂದ್ ಮಾಡಿರುವುದರಿಂದ ಈಗಾಗಲೇ ಅನೇಕ ಜನ ನೌಕರರು ಸತ್ಯಾಗ್ರಹ ಪ್ರಾರಂಭ ಮಾಡಿದ್ದಾರೆ. ಇದರ ಬಗ್ಗೆ ಮತ್ತು ಈ ಸಂಸ್ಥೆ ಇಷ್ಟೊಂದು ಅಧಿಕ ಮೊತ್ತದ ಸರ್ಕಾರದಿಂದ ಸಹಾಯ ಪಡೆದು, ಜಾಗತಿಕ ಸಂಸ್ಥೆಯ ಸಾಲ ಪಡೆದು ಮತ್ತು ಎನ್.ಸಿ.ಡಿ.ಸಿ.ಯಿಂದ ಸಾಲ ಪಡೆದಿರುವ ಈ ಸಂಸ್ಥೆ ಇಷ್ಟೊಂದು ಹಾನಿಗೆ ಒಳಗಾಗಿ, ಇವತ್ತು ಅಲ್ಲಿಯ ನೌಕರರು ಸಂಬಳ ಇಲ್ಲದೆ ಬೀದಿಪಾಲಾಗಿರುವುದರ ಬಗ್ಗೆ ಮಾನ್ಯ ಸಹಕಾರ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ